**ದಿನಾಂಕಃ 9.6.2026 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಃಃ ಮರು ಮುಖ್ಯ ವಿಚಾರಣೆಃ ಮಾನ್ಯಃ ಎಪಿಪಿಯವರಿಂದಃ**

ದಿನಾಂಕಃ 21.1.2025 ರಂದು ನಾನು ನನ್ನ ಸಾಕ್ಷ್ಯ ನೀಡುವಾಗ ದಿನಾಂಕಃ 19.2.2017 ರಂದು ನನ್ನ ಗೋಡನ್ ನಲ್ಲಿ ಕಳ್ಳತನವಾಗಿದ್ದ ಅಡಿಕೆ ಮೂಟೆಗಳು ಮತ್ತು ಕಾಳುಮೆಣಸು ಮೂಟೆಯನ್ನು ಪೊಲೀಸ್ ಠಾಣೆಯಿಂದ ನ್ಯಾಯಾಲಯದ ಆದೇಶದಂತೆ ಹಿಂದಿರುಗಿ ಪಡೆದಿರುತ್ತೇನೆ ಎಂದು ಸಾಕ್ಷ್ಯ ನೀಡಿರುತ್ತೇನೆಂದರೆ ಸರಿ. ಆ ಸಂದರ್ಭದಲ್ಲಿ ಕಣ್ತಪ್ಪಿನಿಂದ ದಿನಾಂಕಃ 19.2.2017 ರಂದು ಜರುಗಿಸಿದ ಮಹಜರನ್ನು ಗುರುತಿಸುವ ಬದಲಾಗಿ ದಿನಾಂಕಃ 17.2.2017 ರ ಅಡಿಕೆ ಜಪ್ತು ಮಹಜರನ್ನು ಗುರುತಿಸಿರುತ್ತೇನೆ. ನಾನು ಅಡಿಕೆ ಜಪ್ತು ಪಂಚನಾಮೆ ಜರುಗಿಸುವ ಸಂದರ್ಭದಲ್ಲಿ ಸ್ಥಳದಲ್ಲಿ ಹಾಜರಿರಲಿಲ್ಲ. ಸಾಕ್ಷಿಯು ಈಗ ದಿನಾಂಕಃ 19.2.2017 ರಂದು ಠಾಣೆಯಲ್ಲಿ ಅಡಿಕೆ ಮತ್ತು ಕಾಳುಮೆಣಸನ್ನು ಹಿಂದಿರುಗಿಸುವಾಗ ಜರುಗಿಸಿದ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-4 ಎಂದು ಗುರುತಿಸಲಾಯಿತು. ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಆ ಸಂದರ್ಭದಲ್ಲಿ ತೆಗೆದುಕೊಳ್ಳಲಾದ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು.

**ಃಪಾಟೀ ಸವಾಲು ಆರೋಪಿ 2 ಪರ ಶ್ರೀ. ಎಂ ಸಿ  ವಕೀಲರಿಂದಃಃ**

ನಿಪಿ-4 ರಲ್ಲಿ ಏನು ವಿಚಾರ ಬರೆದಿದೆ ಎಂದು ನನಗೆ ತಿಳಿದಿರುವುದಿಲ್ಲ ಎಂದರೆ ಸರಿ. ಪೊಲೀಸರು ಹೇಳಿದ್ದರಿಂದ ನಾನು ಸಹಿ ಮಾಡಿದೆ ಎಂದು ನುಡಿಯುತ್ತಾರೆ.

**ಃಃ ಮರು ವಿಚಾರಣೆ ಇಲ್ಲಃಃ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**Sd/-**

**ಪ್ರ.ದ.ನ್ಯಾದಂಃ ನ.ರಾ.ಪುರ.**

**ಸಾಕ್ಷಿ ಸಹಿಃ**